Akashvani : Bengaluru
National Bulletin In Kannada
05.09.2025 : 1.10pm

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

05.09.2025 : 1.10pm

*******

**<><*<><>*><>**

**ಮುಖ್ಯಾಂಶಗಳು**

೧. ಭಾರತವನ್ನು ಜಾಗತಿಕ ಜ್ಞಾನದ ಶಕ್ತಿಕೇಂದ್ರವಾಗಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶ - ರಾಷ್ಟ್ರಪತಿ ದ್ರೌಪದಿ ಮುರ್ಮು

೨. ೨೭ನೇ ಸರಸ್ ಆಜೀವಿಕಾ ಮೇಳಕ್ಕೆ ನವದೆಹಲಿಯಲ್ಲಿಂದು ಚಾಲನೆ

೩. ಪಂಜಾಬ್‌ನಲ್ಲಿ ಭೀಕರ ಪ್ರವಾಹ; ೧ ಸಾವಿರದ ೬೦೦ಕ್ಕೂ ಹೆಚ್ಚು ಹಳ್ಳಿಗಳು ಜಲಾವೃತ

೪. ತಂತ್ರಜ್ಞಾನ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಭೆ; ಕೃತಕ ಬುದ್ಧಿಮತ್ತೆ, ಹೂಡಿಕೆ ಬಗ್ಗೆ ಚರ್ಚೆ

೫. ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿ; ಮೊದಲ ಸುತ್ತಿನಲ್ಲಿ ಹಾಲಿ ವಿಶ್ವ ಚಾಂಪಿಯನ್ ಭಾರತದ ಡಿ. ಗುಕೇಶ್‌ಗೆ ಗೆಲುವು

>><><<><><><><><><><><><<

ಇಂದು ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ದೇಶಾದ್ಯಂತ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ನವದೆಹಲಿಯ ವಿಜ್ಞಾನ ಭವನದಲ್ಲಿ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡರು.ಈ ವೇಳೆ ಮಾತನಾಡಿದ ಅವರು, ಶಿಕ್ಷಣ ವ್ಯಕ್ತಿಯನ್ನು ಸಶಸ್ತಗೊಳಿಸುತ್ತದೆ. ಮಕ್ಕಳ ಯಶಸ್ಸಿನ ಪಯಣಕ್ಕೆ ಶಕ್ತಿ ತುಂಬುವಲ್ಲಿ ಸ್ನೇಹಿ ಮತ್ತು ನಿಷ್ಠಾವಂತ ಶಿಕ್ಷಕರ ಪಾತ್ರ ಪ್ರಮುಖವಾಗಿರುತ್ತದೆ. ವಿದ್ಯಾರ್ಥಿಗಳು ಶಿಕ್ಷರನ್ನು ಸದಾ ಸ್ಮರಿಸುತ್ತಾ, ಕುಟುಂಬ, ಸಮಾಜ ಮತ್ತು ಒಟ್ಟಾರೆ ರಾಷ್ಟ್ರಕ್ಕೆ ಅತ್ಯಮೂಲ್ಯ ಕೊಡುಗೆ ನೀಡುವುದೇ ಶಿಕ್ಷಕರ ಪಾಲಿಗೆ ಪುರಸ್ಕಾರವಾಗಿದೆ. ಶಿಕ್ಷಕರ ನಡವಳಿಕೆಯೇ ಮಕ್ಕಳ ಪಾಲಿಗೆ ಮಾರ್ಗದರ್ಶಿಯಾಗಿರುತ್ತದೆ ಎಂದರು. ಭಾರತವನ್ನು ಜಾಗತಿಕ ಜ್ಞಾನದ ಶಕ್ತಿಕೇಂದ್ರವಾಗಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶವಾಗಿದೆ. ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ಎಂಬ ಶಿಕ್ಷಣದ ಮೂರು ಕ್ಷೇತ್ರಗಳಲ್ಲಿ ಶಿಕ್ಷಕರು ಹೆಚ್ಚಿನ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು (೩೮ ಸೆಕೆಂಡ್ಸ್)

ಈ ವಾರ್ಷಿಕ ಪ್ರಶಸ್ತಿಯನ್ನು ದೇಶದ ವಿಭಿನ್ನ ಭಾಗಗಳಿಂದ ಆಯ್ಕೆಗೊಂಡ ಅತ್ಯುತ್ತಮ ಶಿಕ್ಷಕರ ಸೇವೆ, ನಿಷ್ಠೆ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ತಂದಿರುವ ಉನ್ನತ ಮಟ್ಟದ ಪರಿವರ್ತನೆಯನ್ನು ಗುರುತಿಸುವ ಉದ್ದೇಶದಿಂದ ನೀಡಲಾಗುತ್ತದೆ.ಈ ಪ್ರಶಸ್ತಿಗೆ ಪಾತ್ರರಾದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಜೀವನದಲ್ಲಿ ಸಕಾರಾತ್ಮಕ ಬದಲಾವಣೆ

ತರಲು ಸಲ್ಲಿಸಿದ ಪರಿಶ್ರಮಕ್ಕಾಗಿ ಸ್ಮರಣೀಯರಾಗಿದ್ದಾರೆ.ಶಿಕ್ಷಣ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಪ್ರೋತ್ಸಾಹಿಸುವ ಈ ಪ್ರಶಸ್ತಿ, ದೇಶದಾದ್ಯಂತ ಶಿಕ್ಷಕರಿಗೆ ಪ್ರೇರಣೆಯ ಮೂಲವಾಗಿದೆ.

>><><<><><><><><><><><><<

೨೭ನೇ ಸರಸ್ ಆಜೀವಿಕಾ ಮೇಳಕ್ಕೆ ನವದೆಹಲಿಯಲ್ಲಿಂದು ಚಾಲನೆ ದೊರೆಯಲಿದೆ. ಈ ಮೇಳ ಗ್ರಾಮೀಣ ಮಹಿಳೆಯರಿಗೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡುವ ಪ್ರಮುಖ ಮಾರುಕಟ್ಟೆ ವೇದಿಕೆಯನ್ನು ಒದಗಿಸಲಿದೆ.ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಬಂದಿರುವ ೪೦೦ಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳ ಸದಸ್ಯೆಯರು ಈ ಮೇಳದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. 'ಲಕಪತಿ ದೀದಿಗಳ ನಿರ್ಮಾಣ: ಗ್ರಾಮೀಣ ಮಹಿಳೆಯರನ್ನು ಯಶಸ್ವಿ ಉದ್ಯಮಿಗಳಾಗಿ ಹಾಗೂ ವೋಕಲ್ ಫಾರ್ ಲೋಕಲ್ ನ ಚಾಂಪಿಯನ್‌ಗಳಾಗಿ ಸಶಕ್ತಗೊಳಿಸುವುದು' ಎಂಬುದು ಈ ವರ್ಷದ ಮೇಳದ ಘೋಷವಾಕ್ಯವಾಗಿದೆ.ವಿಶೇಷವಾಗಿ, ಸಂಪೂರ್ಣವಾಗಿ ಲಕಪತಿ ದೀದಿಗಳ ನೇತೃತ್ವದಲ್ಲಿ ನಡೆಯುತ್ತಿರುವ ಮೊದಲನೇ ಮೇಳ ಇದಾಗಿದೆ. ಅವರು ತಯಾರಿಸಿದ ಉತ್ಪನ್ನಗಳು, ಕೈಮಗ್ಗ ಹಾಗೂ ಆಹಾರ ಉತ್ಪನ್ನಗಳನ್ನು ಮೇಳದಲ್ಲಿ ಪ್ರದರ್ಶಿಸಲಿದ್ದಾರೆ.ಈ ಮೇಳ ಇದೇ ೨೨ ರವರೆಗೆ ನಡೆಯಲಿದೆ.

>><><<><><><><><><><><><<

ಪಂಜಾಬ್‌ನಲ್ಲಿ ಉಂಟಾದ ಭೀಕರ ಪ್ರವಾಹದಿಂದಾಗಿ ೧ ಸಾವಿರದ ೯೦೦ಕ್ಕೂ ಹೆಚ್ಚು ಹಳ್ಳಿಗಳು ಜಲಾವೃತಗೊಂಡಿವೆ. ೪ ಲಕ್ಷ ಎಕರೆ ಕ್ಕಿಂತ ಹೆಚ್ಚು ಕೃಷಿಭೂಮಿಯಲ್ಲಿ ನಿಂತಿದ್ದ ಬೆಳೆಗಳು ನಾಶವಾಗಿದ್ದು, ಈಗಾಗಲೇ ಸಾವಿನ ಸಂಖ್ಯೆ ೪೩ಕ್ಕೆ ಏರಿಕೆಯಾಗಿದೆ.ಈ ಹಿನ್ನೆಲೆಯಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪಂಜಾಬ್‌ಗೆ ಭೇಟಿ ನೀಡಿದ್ದು, ಪರಿಸ್ಥಿತಿಯ ಸಮೀಕ್ಷೆ ನಡೆಸಿದ್ದಾರೆ. ಅವರು ಕೇಂದ್ರ ಸರ್ಕಾರದಿಂದ ಎಲ್ಲ ರೀತಿಯ ಸಹಾಯ ನೀಡಲಾಗುವುದು ಎಂದು ಭರವಸೆ ನೀಡಿದ್ದು, ರಾಜ್ಯ ವಿಪತ್ತು ಪರಿಹಾರ ನಿಧಿಯಲ್ಲಿ ಈಗಾಗಲೇ ನಿಧಿ ಲಭ್ಯವಿದೆ ಎಂದಿದ್ದಾರೆ. ಎರಡು ಕೇಂದ್ರ ತಂಡಗಳು ಒಟ್ಟು ನಷ್ಟದ ಅಂದಾಜು ಹಾಕುತ್ತಿರುವುದಾಗಿ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.ಭಾರತೀಯ ಸೇನೆ, ಗಡಿ ಭದ್ರತಾ ಪಡೆ, ರಾಷ್ಟ್ರೀಯ ವಿಪತ್ತು ಪರಿಹಾರ ಪಡೆ ಹಾಗೂ ರಾಜ್ಯ ಪೊಲೀಸ್ ತಂಡಗಳೊಂದಿಗೆ ಸಾರ್ವಜನಿಕರು ಶ್ರಮಿಸಿ ನದಿಯ ತೀರಗಳಲ್ಲಿ ತಡೆಗೋಡೆಗಳನ್ನು ಬಲಪಡಿಸುವ ಕೆಲಸದಲ್ಲಿ ತೊಡಗಿದ್ದಾರೆ. ಸುಮಾರು ೨೧ ಸಾವಿರ ಜನರನ್ನು ಈಗಾಗಲೇ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಇದರ ಜೊತೆಗೆ ಪ್ರವಾಹದ ಭೀತಿ ಎದುರಿಸುತ್ತಿರುವ ಪ್ರದೇಶಗಳ ಜನರು, ತಳ ಪ್ರದೇಶಗಳಿಂದ ತಕ್ಷಣ ಸುರಕ್ಷಿತ ಸ್ಥಳಗಳಿಗೆ ಹೋಗುವಂತೆ ಸ್ಥಳೀಯ ಜಿಲ್ಲಾಡಳಿತ ಮನವಿ ಮಾಡಿದೆ.

>><><<><><><><><><><><><<

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿನ್ನೆ ರಾತ್ರಿ ಶ್ವೇತಭವನದಲ್ಲಿ ಉನ್ನತ ಮಟ್ಟದ ತಂತ್ರಜ್ಞಾನ ಸಂಸ್ಥೆಗಳ ಮುಖ್ಯ ಕಾರ್ಯ ನಿರ್ವಹಣಾ ಧಿಕಾರಿಗಳ ಜೊತೆಗೆ ಮಹತ್ವದ ಸಭೆ ನಡೆಸಿದರು. ಈ ಸಭೆಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಅಮೆರಿಕಾದಲ್ಲಿನ ಹೂಡಿಕೆಗಳ ಕುರಿತಾಗಿ ಚರ್ಚಿಸಲಾಯಿತು.ಮೈಕ್ರೋಸಾಫ್ಟ್‌ನ ಬಿಲ್ ಗೇಟ್ಸ್, ಆಪಲ್‌ನ ಟಿಮ್ ಕುಕ್, ಮತ್ತು ಮೆಟಾ ಸಂಸ್ಥೆಯ ಮಾರ್ಕ್ ಝುಕರ್‌ಬರ್ಗ್ ಸೇರಿ ಹದಿನೆಂಟಕ್ಕೂ ಅಧಿಕ ಸಿಇಓಗಳು ಸಭೆಯಲ್ಲಿ ಭಾಗವಹಿಸಿದ್ದರು. ಆದರೆ ಟೆಸ್ಲಾ ಮತ್ತು ಸ್ಪೇಸ್ ಎಕ್ಸ್ ಸಂಸ್ಥೆಗಳ ಸಿಇಓ ಎಲಾನ್ ಮಸ್ಕ್ ಸಭೆಗೆ ಹಾಜರಾಗಿರಲಿಲ್ಲ.

>><><<><><><><><><><><<

ಇಂದು ದೇಶಾದ್ಯಂತ ಕೇರಳಿಗರು ತಿರು ಓಣಂ ಹಬ್ಬವನ್ನು ಆಚರಿಸುತ್ತಿದ್ದಾರೆ. ತಿರು ಓಣಂ ಕೇರಳದಲ್ಲಿ ಅತಿ ದೊಡ್ಡ ಹಬ್ಬವಾಗಿದ್ದು, ಜಾತಿ ಮತ್ತು ಧರ್ಮವನ್ನು ಮೀರಿ ಆಚರಿಸಲಾಗುವ ಈ ಹಬ್ಬ ೧೧ ದಿನಗಳ ಹಿಂದೆ ಅತ್ತಂ ಹಬ್ಬದೊಂದಿಗೆ ಪ್ರಾರಂಭವಾಗುತ್ತದೆ.ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಓಣಂ ಹಬ್ಬದ ಅಂಗವಾಗಿ ದೇಶದ ನಾಗರಿಕರಿಗೆ ಶುಭಾಶಯಗನ್ನು ಕೋರಿದ್ದಾರೆ.ಓಣಂ ಕೇರಳದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಸಂಪ್ರದಾಯದ ವಿಶಿಷ್ಟ ಉದಾಹರಣೆಯಾಗಿದ್ದು, ದೇಶದ ರೈತರಿಗೆ ಕೃತಜ್ಞತೆ ಸಲ್ಲಿಸುವ ಒಂದು ಸಂದರ್ಭವಾಗಿದೆ ಎಂದು ರಾಷ್ಟ್ರಪತಿ ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

>><><<><><><><><><><><<

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳನ್ನು ಶ್ಲಾಘಿಸಿದ್ದು, ಅವುಗಳನ್ನು ಹಸಿರು ಭಾರತಕ್ಕಾಗಿ ಸುಧಾರಣೆಗಳು ಎಂದು ಕರೆದಿದ್ದಾರೆ.ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಜಿಎಸ್‌ಟಿ ಕುರಿತಾಗಿ ಹಂಚಿಕೊಂಡಿರುವ ಭೂಪೇಂದರ್ ಯಾದವ್ ಜಿಎಸ್‌ಟಿ ಏಕರೂಪಗೊಳಿಸುವಿಕೆ, ನವೀಕರಿಸಬಹುದಾದ ಇಂಧನವನ್ನು ಭಾರತದ ಹವಾಮಾನ ಕಾರ್ಯತಂತ್ರದ ಬೆನ್ನೆಲುಬಾಗಿ ಉಳಿಸಿದೆ ಎಂದು ಹೇಳಿದ್ದಾರೆ.

>><><<><><><><><><><><><<

ಪ್ರವಾದಿ ಹಜ್ರತ್ ಮೊಹಮ್ಮದ್ ಅವರ ಜನ್ಮದಿನವಾದ ಮಿಲಾದ್-ಉನ್-ನಬಿ, ಅನ್ನು ದೇಶದ ವಿವಿಧ ಭಾಗಗಳಲ್ಲಿ ಇಂದು ಮುಸ್ಲಿಂ ಬಾಂಧವರಿಂದ ಭಕ್ತಿಭಾವದೊಂದಿಗೆ ಆಚರಿಸಲಾಗುತ್ತಿದೆ.ಈ ಸಂದರ್ಭದ ಅಂಗವಾಗಿ "ಮಿಲಾದ್ ಮೆಹ್ಫಿಲ್" ಮತ್ತು "ಸೀರತ್ ಸಮ್ಮೇಳನಗಳು" ನಡೆಯುತ್ತಿದ್ದು, ಅವುಗಳಲ್ಲಿ ಪ್ರವಾದಿ ಮೊಹಮ್ಮದ್ ಅವರ ಜೀವನಚರಿತ್ರೆ ಹಾಗೂ ಉಪದೇಶಗಳ ಬಗ್ಗೆ ಬೆಳಕು ಚೆಲ್ಲಲಾಗುತ್ತಿದೆ.ಮಿಲಾದ್ ಮೆರವಣಿಗೆಗಳು ಸಹ ವಿವಿಧ ನಗರ ಮತ್ತು ಪಟ್ಟಣಗಳಲ್ಲಿ ಆಯೋಜಿಸಲ್ಪಟ್ಟಿವೆ, ಜನತೆ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ.ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ, ಮಿಲಾದ್-ಉನ್-ನಬಿ ಸಂದರ್ಭದಲ್ಲಿ ದೇಶದ ಜನತೆಗೆ ವಿಶೇಷವಾಗಿ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದ್ದಾರೆ. ಪ್ರವಾದಿ ಮುಹಮ್ಮದ್ ಅವರು ಮನುಕುಲಕ್ಕೆ ಏಕತೆ ಮತ್ತು ಸೇವೆಯ ಸಂದೇಶವನ್ನು ನೀಡಿದ್ದಾರೆ. ಹಬ್ಬದ ಶುಭಾಶಯ ಕೋರಿರುವ ಪ್ರಧಾನಿ ನರೇಂದ್ರ ಮೋದಿ, ಕರುಣೆ, ಸೇವೆ ಮತ್ತು ನ್ಯಾಯದ ಮೌಲ್ಯಗಳು ಎಲ್ಲರನ್ನೂ ಸದಾ ಮಾರ್ಗದರ್ಶನ ನೀಡಲಿ ಎಂಬ ಆಶಯ ವ್ಯಕ್ತಪಡಿಸಿದ್ದಾರೆ.

>><><<><><><><><><><><><<

ಉಜ್ಬೆಕಿಸ್ತಾನದ ಸಮರ್‌ಕಾಂಡ್‌ನಲ್ಲಿ ನಡೆಯುತ್ತಿರುವ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಭಾರತೀಯ ಕ್ರೀಡಾಪಟುಗಳು ಉತ್ತಮ ಆರಂಭ ಕಂಡಿದ್ದಾರೆ.ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಮೊದಲ ಅಂತರಾಷ್ಟ್ರೀಯ ಸುತ್ತಿನಲ್ಲಿ ಫ್ರಾನ್ಸ್‌ನ ಎಟಿಯೆನ್ ಬಾಕ್ರೋ ವಿರುದ್ಧ ಭರ್ಜರಿ ಗೆಲುವು ದಾಖಲಿಸಿದರು.ಮತ್ತೊಂದೆಡೆ, ಟೂರ್ನಿಯ ಅಗ್ರ ಶ್ರೇಯಾಂಕಿತ ಆಟಗಾರ ಆರ್. ಪ್ರಜ್ಞಾನಂದ, ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಜೆಫರಿ ಝಿಯಾಂಗ್ ವಿರುದ್ಧದ ಮೊದಲ ಸುತ್ತಿನಲ್ಲಿ ಡ್ರಾ ಮಾಡಿಕೊಂಡರು. ಈ ಟೂರ್ನಿಯಲ್ಲಿ ಒಟ್ಟು ೧೧ ಸುತ್ತುಗಳು ನಡೆಯಲಿವೆ.

>><><<><><><><><><><><><<

ಶ್ರೀಲಂಕಾದಲ್ಲಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ೧೫ ಮಂದಿ ಮೃತ ಪಟ್ಟಿದ್ದು, ೧೮ ಮಂದಿ ಗಾಯಗೊಂಡಿದ್ದಾರೆ. ಎಲ್ಲವೆಲ್ಲವಾಯಾ ಮುಖ್ಯ ರಸ್ತೆಯಲ್ಲಿ ಕಾರ್ಮಿಕರನ್ನು ಕೊಂಡೊಯ್ಯುತ್ತಿದ್ದ ಬಸ್ ಗುರುವಾರ ತಡರಾತ್ರಿ ಪ್ರವಾಸದ ವೇಳೆ ನಿಯಂತ್ರಣ ತಪ್ಪಿ ಕಂದಕದಲ್ಲಿ ಉರುಳಿದ ಪರಿಣಾಮ ಕನಿಷ್ಠ ೧೫ ಮಂದಿ ಮೃತಪಟ್ಟಿದ್ದು, ೧೮ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

>><><<><><><><><><><><><<

ರಾಜಗಿರ್ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಏಷ್ಯಾ ಕಪ್ ಹಾಕಿ ಚಾಂಪಿಯನ್‌ಷಿಪ್‌ನ ಸೂಪರ್ ೪ ಹಂತದ ಪಂದ್ಯದಲ್ಲಿ ಭಾರತ, ಮಲೇಶಿಯಾವನ್ನು ೪-೧ ಗೋಲುಗಳಿಂದ ಸೋಲಿಸಿದೆ. ಮನಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಶಿಲಾನಂದ್ ಲಕ್ರಾ ಮತ್ತು ವಿವೇಕ್ ಸಾಗರ್ ಪ್ರಸಾದ್ ತಲಾ ಒಂದು ಗೋಲು ಗಳಿಸಿ ತಂಡದ ಗೆಲುವಿನಲ್ಲಿ ಮಹತ್ವದ ಪಾತ್ರವಹಿಸಿದರು.ಈ ಗೆಲುವಿನಿಂದ ಭಾರತ, ಕೊರಿಯಾ, ಮಲೇಶಿಯಾ ಮತ್ತು ಚೀನಾ ತಂಡಗಳಿರುವ ಸೂಪರ್ ೪ ಗುಂಪಿನಲ್ಲಿ ನಾಲ್ಕು ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಭಾರತದ ಮುಂದಿನ ಪಂದ್ಯ ನಾಳೆ ಚೀನಾದ ವಿರುದ್ಧ ನಡೆಯಲಿದೆ.

>><><<><><><><><><><><><<

ಯುಎಸ್ ಓಪನ್ ಟೆನಿಸ್ ಸ್ಪರ್ಧೆಯ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಯುಕಿ ಭಾಂಬ್ರಿ ಮತ್ತು ನ್ಯೂಜಿಲಂಡ್‌ನ ಮೈಕಲ್ ವೀನಸ್ ಜೋಡಿ ಸೆಮಿಫೈನಲ್ ಹಂತದಲ್ಲಿ ಪರಾಭವಗೊಂಡಿದ್ದಾರೆ.ಅವರು ಬ್ರಿಟನ್‌ನ ನೀಲ್ ಸ್ಕಪ್ಸ್ಕಿ ಮತ್ತು ಜೋ ಸಾಲ್ಸ್ಬ ರಿ ವಿರುದ್ಧ ೬-೭, ೭-೬, ೬-೪ ಅಂತರದಿಂದ ಸೋಲನುಭವಿಸಿದರು.

>><><<><><><><><><><><><<